ಸಂಗತಿಯಲ್ಲ. ಇದು ಪೂರ್ವ-ಪಶ್ಚಿಮಗಳ ನಡುವಣ ಬೌದ್ಧಿಕ ಮಟ್ಟದ ತರತಮ ಕುರಿತ ಮಾತೆಂದು ಭಾವಿಸಬಾರದು. ಸಾವಿರಾರು ವರ್ಷಗಳ ಅಧ್ಯಯನದ ಪರಂಪರೆಯನ್ನು ಹೊಂದಿದ ಪಶ್ಚಿಮದ ವಿದ್ಯಾಸಂಸ್ಥೆಗಳಲ್ಲಿ ವಿದ್ವಾಂಸರಾಗಿ ಕೆಲಸ ಮಾಡುವವರಿಗೆ ಇರುವ ಅತ್ಯಗತ್ಯ ಅನುಕೂಲಗಳು, ಸಂಪನ್ಮೂಲಗಳು ಕನ್ನಡದ ವಿದ್ವಾಂಸನಿಗೆ ಲಭ್ಯವಾಗುವುದು ವಿರಳ ಮತ್ತು ಕಷ್ಟಸಾಧ್ಯ. ತನ್ನ ಕಾಲದ ಕನ್ನಡ ಜಗತ್ತಿನ ಚರ್ಚೆಗಳು ಮತ್ತು ವಿದ್ವಾಂಸರ ಜೊತೆಗಿನ ಒಡನಾಟ ನಾಗರಾಜರನ್ನು ಉನ್ನತಮಟ್ಟದ ಚಿಂತಕರನ್ನಾಗಿ ರೂಪಿಸಿದವು ಎನ್ನುವುದರಲ್ಲಿ ಎರಡು ಮಾತಿಲ್ಲವಾದರೂ, ಬೌದ್ಧಿಕ ಅನ್ವೇಷಣೆಗೆ ಎಲ್ಲ ರೀತಿಯಿಂದ ಒದಗಿಬರುವ ಸಾಂಸ್ಥಿಕ ವಾತಾವರಣ ಮತ್ತು ತೀವ್ರವಾದ ತರಬೇತಿಯನ್ನು ನಾವು ಇಂದಿಗೂ ಹೆಚ್ಚಿನೆಡೆಗಳಲ್ಲಿ ನಿರೀಕ್ಷಿಸುವಂತಿಲ್ಲ ಎಂಬುದನ್ನು ನೆನಪಿಸಿಕೊಂಡರೆ, ನಾಗರಾಜರು ಕ್ರಮಿಸಿದ ಹಾದಿಯಲ್ಲಿದ್ದ ಸವಾಲುಗಳು ಇನ್ನಷ್ಟು ನಿಚ್ಚಳವಾಗಿ ಕಂಡಾವು.

ನಾವು ಇಂದು ಅನುಸರಿಸುತ್ತಿರುವುದು ಪಶ್ಚಿಮ ಸಂಸ್ಕೃತಿಯ ಒಡಲಲ್ಲಿ ಹುಟ್ಟಿ ಬೆಳೆದು ಬಂದ ಅಧ್ಯಯನದ ಮಾದರಿಯೇ. ವಸಾಹತುಶಾಹಿಯ ಮೂಸೆಯಲ್ಲಿ ರೂಪುಗೊಂಡು ನಮ್ಮ ಸಂಸ್ಕೃತಿಯಲ್ಲಿ ಕಸಿ ಮಾಡಲಾದ ಈ ಆಧುನಿಕ ಓದು, ಅಧ್ಯಯನ ಮತ್ತು ಸಂಶೋಧನೆಗಳಿಗೆ ಇನ್ನೂರು ವರ್ಷಗಳಾಚೆಗೆ ನಮ್ಮಲ್ಲಿ ಯಾವ ಸ್ಥಾಪಿತ ಪರಂಪರೆಯೂ ಇಲ್ಲದಿರುವ ಕಾರಣದಿಂದ ಅದು ಇನ್ನೂ ಗಟ್ಟಿಗೊಳ್ಳುವ ಪ್ರಕ್ರಿಯೆಯಲ್ಲಿಯೇ ಇದೆ. ಇಂದಿನ ಪರಿಸ್ಥಿತಿ ಸ್ವಲ್ಪ ಬದಲಾಗಿರಬಹುದು. ಆದರೆ ಡಿ.ಆರ್. ನಾಗರಾಜರ ತಲೆಮಾರಿನವರಿಗೆ ಸಾಂಸ್ಥಿಕ ಬೆಂಬಲವಾಗಲಿ, ಬೌದ್ಧಿಕವಾಗಿ ಪೋಷಕ ವಾತಾವರಣವಾಗಲಿ, ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಿರಲಿಲ್ಲ. ಜ್ಞಾನ ಸೃಷ್ಟಿಯ ಕ್ಷೇತ್ರಗಳಲ್ಲಿ ಇರುವ ಈ ಭೌಗೋಳಿಕ ರಾಜಕೀಯ (ಜಿಯೋಪೊಲಿಟಿಕಲ್) ಅಸಮಾನತೆಯ ಕಾರಣದಿಂದ ಪಶ್ಚಿಮೇತರ ಸಂಸ್ಕೃತಿಗಳಲ್ಲಿ ಅಧ್ಯಯನಕಾರರಾಗುವುದೆಂದರೆ ಒಂದು ಹೋರಾಟವೇ ಸರಿ.

ಈ ಸಂಗತಿಗಳ ಬೆಳಕಿನಲ್ಲಿ ನೋಡಿದಾಗ, ನಾಗರಾಜರ ಸಾಧನೆ ಅಸಾಧಾರಣವಾದದ್ದು ಎನಿಸುತ್ತದೆ. ದೊಡ್ಡಬಳ್ಳಾಪುರದಂತಹ ಕಿರು ಶಹರದಲ್ಲಿ ಹುಟ್ಟಿ ಬೆಳೆದ ಹುಡುಗ ಬೆಂಗಳೂರಿನಲ್ಲಿ ಓದಿ, ಅಧ್ಯಾಪನದಲ್ಲಿ ನೆಲೆ ಕಂಡುಕೊಂಡಿದ್ದು; ಅಲ್ಲಿಗೇ ನಿಲ್ಲದೆ ನಂತರ ದೆಹಲಿಯ ಸಿ.ಎಸ್.ಡಿ.ಎಸ್ (ಸೆಂಟರ್ ಫಾರ್ ದ ಸ್ಟಡಿ ಆಫ್ ಡೆವಲಪಿಂಗ್ ಸೊಸೈಟೀಸ್) ಮತ್ತು ಶಿಕಾಗೊ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ- ಅಧ್ಯಾಪನದ ಮೂಲಕ ಅಂತರರಾಷ್ಟ್ರೀಯ ಮನ್ನಣೆ ಗಳಿಸಿದ್ದು, ಆಧುನಿಕ ಭಾರತದ ಶೈಕ್ಷಣಿಕ ಇತಿಹಾಸದಲ್ಲಿಯೇ ಅಪರೂಪದ ಸಾಧನೆ.

ಬೌದ್ಧಿಕವಾಗಿ ತೀವ್ರತೆಯಿಂದ ಬದುಕಿದ ಇಂತಹ ವಿದ್ವಾಂಸರ ಜೀವನ ರೂಪುಗೊಂಡ ಬಗೆಯೇ ಒಂದು ವಿಶಿಷ್ಟವಾದ ಕಥನಕ್ಕೆ ಯೋಗ್ಯವಾಗಿರುವಂಥದ್ದು ಎಂಬ ನಂಬಿಕೆಯಿಂದ ಡಿ.ಆರ್. ನಾಗರಾಜ್ ಅವರ ಬೌದ್ಧಿಕ ಯಾತ್ರೆಯನ್ನು (intellectual biography), ಅವರ ಅಧ್ಯಯನದ ವಿಸ್ತಾರ ಮತ್ತು ವಿಶಿಷ್ಟ ವಿಧಾನಗಳನ್ನು ಈಗಿನ ತಲೆಮಾರಿನವರಿಗೆ ಪರಿಚಯಿಸುವ ಪ್ರಯತ್ನವನ್ನು ಇಲ್ಲಿ ಮಾಡುತ್ತೇನೆ.

ಕನ್ನಡ ಸಾರಸ್ವತ ಲೋಕದಲ್ಲಿ 'ಡಿಆರ್' ಎಂದೇ ಪರಿಚಿತರಾಗಿದ್ದ ದೊಡ್ಡಬಳ್ಳಾಪುರದ ರಾಮಯ್ಯನವರ ಮಗ ನಾಗರಾಜ್, 1954ರ ಫೆಬ್ರುವರಿ 20ರಂದು ದೇವಾಂಗ (ನೇಯ್ಗೆ ವೃತ್ತಿಯ ಸಾಮಾಜಿಕ ಹಿನ್ನೆಲೆ) ಕುಟುಂಬದಲ್ಲಿ ಜನಿಸಿದರು. ಶಾಲಾ ಶಿಕ್ಷಕರಾಗಿದ್ದ ತಂದೆ ರಾಮಯ್ಯ ಮತ್ತು ತಾಯಿ ಅಕ್ಕಯ್ಯಮ್ಮ ಅವರ ಪೋಷಣೆಯಲ್ಲಿ ಬೆಳೆದ ನಾಗರಾಜ್ ಉನ್ನತ ಶಿಕ್ಷಣಕ್ಕಾಗಿ ಬೆಂಗಳೂರಿಗೆ ಪದಾರ್ಪಣೆ ಮಾಡಿದರು.